ವಾರದ ಪತ್ರ

## ದುರ್ಗುಣಗಳ ಕಲಿಸುವ ವಿಶ್ವವಿದ್ಯಾಲಯಗಳು

ಟೀವಿ ಧಾರಾವಾಹಿಗಳು ಅಸಹ್ಯವಾಗುವಷ್ಟು ಸುಳ್ಳು, ಮೋಸ ಮಾಡುವಂತಹ ದುರ್ಗುಣಗಳನ್ನು ಕಲಿಸುವ ವಿಶ್ವವಿದ್ಯಾಲಯಗಳಂತೆ ಕಾಣುತ್ತಿವೆ. ಧಾರಾವಾಹಿಗಳಲ್ಲಿನ ಪಾತ್ರಗಳು ವಾಹನ ಚಾಲನೆಯ ವೇಳೆ ಕಾನೂನು ಧಿಕ್ಕರಿಸುತ್ತವೆ. ಮನೆ–ಕಚೇರಿಗಳ ಗೇಟುಗಳನ್ನು ತೆರೆದು ಮುಚ್ಚದೆ ಹಾಗೇ ಹೋಗುವುದು, ಲಕೋಟೆ–ಕಾಗದಗಳನ್ನು ಹರಿದು ನಿಂತಲ್ಲೇ ಬಿಸಾಡುವುದು. ಇಬ್ಬರು ಹೊಡೆದಾಡುವುದನ್ನು ತಪ್ಪಿಸುವ ಪ್ರಯತ್ನ ಮಾಡದೇ ಕೈ ಹಿಸುಕಿಕೊಳ್ಳುತ್ತ ನಿಂತು ನೋಡುವುದು. ರಸ್ತೆಯ ಮಧ್ಯ ನಡೆದುಕೊಂಡು ಹೋಗುವುದು. ಅಗತ್ಯ ಸಂದರ್ಭದಲ್ಲಿ ಪ್ರಥಮ ಚಿಕಿತ್ಸೆಯ ಪ್ರಾಥಮಿಕ ತಿಳಿವಳಿಕೆ ಮೂಡಿಸದೇ ಇರುವುದು, ಅಪಶಕುನ, ಮಾಟ ಮಂತ್ರವನ್ನು ಜನರಲ್ಲಿ ಬೇರೂರುವಂತೆ ಮೌಢ್ಯವನ್ನು ಬಿತ್ತುವುದು – ಇವುಗಳಲ್ಲಿ ಯಾವ ದೃಷ್ಟಿಕೋನದಲ್ಲೂ ಕಲಿಯುವಂತಹದ್ದು ಇಲ್ಲ.

–ಜಿ. ಮೃತ್ಯುಂಜಯ, ಬೆಂಗಳೂರು

## ಶಿಕ್ಷಣದ ನಿಯಮಗಳ ತಿಳಿವಳಿಕೆ ಅಗತ್ಯ

ಝೀ ಕನ್ನಡದ 'ಸತ್ಯ' ಧಾರಾವಾಹಿ ನಿರ್ಮಾತೃಗಳಿಗೆ ಶೈಕ್ಷಣಿಕ ನೀತಿಯ ಅರಿವು ಇದ್ದಂತಿಲ್ಲ. ನಾಯಕಿಯ ಕೈಗೆ ಗಾಯ ಆಗಿದ್ದರಿಂದ ಪರೀಕ್ಷೆ ಬರೆಯಲು ಅಸಾಧ್ಯ. ಈ ಕಾರಣವನ್ನು ಇಟ್ಟುಕೊಂಡು ಅವಳ ಅತ್ತೆ ಬರೆಯಲು ಬರುತ್ತಾರೆ. ಆ ರೀತಿ ಬಂದವರಿಗೆ ಪ್ರತ್ಯೇಕ ಕೊಠಡಿಯನ್ನು ನೀಡಿ ಅದಕ್ಕೆ ಒಬ್ಬ ಮೇಲ್ವಿಚಾರಕರನ್ನು ನೇಮಿಸಬೇಕು ಎಂಬ ನಿಯಮವಿದೆ. ಕಾರಣ, ಉತ್ತರವನ್ನು ಪರೀಕ್ಷಾರ್ಥಿ ಜೋರಾಗಿ ಹೇಳುವುದರಿಂದ ಬೇರೆ ವಿದ್ಯಾರ್ಥಿಗಳಿಗೆ ತೊಂದರೆ ಆಗದೆ ಇರಲಿ ಎಂದು. ಆದರೆ ನಾಯಕಿ ಎಲ್ಲ ವಿದ್ಯಾರ್ಥಿಗಳ ಕೊಠಡಿಯಲ್ಲಿ ಪರೀಕ್ಷೆ ಬರೆಯುವುದು ಎಷ್ಟು ಸರಿ? ಈ ರೀತಿಯ ದೃಶ್ಯಗಳನ್ನು ತೋರಿಸುವಾಗ ಸ್ವಲ್ಪ ಮಟ್ಟಿಗೆ ನಿಯಮಗಳನ್ನು ತಿಳಿದು ಮಾಡಬೇಕು.

–ಗಾಯತ್ರಿ ದೇವಿ

## ಆದರ್ಶ ಅತ್ತೆ-ಸೊಸೆಗೆ ಸಲಾಂ

ಕಲರ್ಸ್ ಕನ್ನಡದ 'ಭಾಗ್ಯಲಕ್ಷ್ಮಿ' ಧಾರಾವಾಹಿಯ ತಾಂಡವ್ ಮನೆ ಬಿಟ್ಟು ಹೋದ ಮೇಲೆ ಅತ್ತೆ–ಸೊಸೆಯರ ಸಂಭಾಷಣೆ ಹೃದಯಸ್ಪರ್ಶಿಯಾಗಿತ್ತು. ಸೊಸೆಯ ಮೇಲೆ ಕೈ ಮಾಡಿದ ಮಗ ಕ್ಷಮೆಗೆ ಅರ್ಹನಲ್ಲ. ತಾನೇ ಹೆತ್ತ ಮಗನಾದರೂ ಅವನನ್ನು ಮನೆಗೆ ಕರೆತರುವ ಮಾತೇ ಇಲ್ಲ ಎನ್ನುವ ಕುಸುಮಾಳ ಮಾತಿಗೆ ಭಾಗ್ಯ, ಗಂಡನ ಅನುಪಸ್ಥಿತಿಯಲ್ಲಿ ತಾನು ಅತ್ತೆ ಮಾವಂದಿರನ್ನು ಯಾರ ಸಹಾಯವಿಲ್ಲದೇ ನೋಡಿಕೊಳ್ಳುತ್ತೇನೆ ಎನ್ನುವ ಭರವಸೆಯ ಮಾತುಗಳು ಅರ್ಥಪೂರ್ಣವಾಗಿದ್ದವು. ಇಂಥ ಆದರ್ಶ ಅತ್ತೆ–ಸೊಸೆ ಇದ್ದರೆ ವೃದ್ಧಾಶ್ರಮಗಳ ಅಗತ್ಯ ಇರುವುದಿಲ್ಲ.

–ಮನೋಜ್ ಕುಮಾರ್ ಕೆ.



## ಮನಗೆದ್ದ ಮಾತಿನ ಮಲ್ಲ

ಝೀ ಕನ್ನಡದ 'ಸರಿಗಮಪ' ಕಾರ್ಯಕ್ರಮಕ್ಕೆ ಸಾಧು ಕೋಕಿಲ ಅವರ ಆಗಮನ ಕಾರ್ಯಕ್ರಮದ ಹಿರಿಮೆಯನ್ನು ಹೆಚ್ಚಿಸಿದೆ ಎಂದೆನ್ನಬಹುದು. ಇವರ ಬಹುಮುಖ ಪ್ರತಿಭೆ ಇಲ್ಲಿ ಅನಾವರಣಗೊಂಡಿತು. ಅವರು ನಿರ್ದೇಶಕ, ರಾಗ ಸಂಯೋಜಕ, ಗಾಯಕ, ಹಾಗೂ ಕೀಬೋರ್ಡ್, ತಬಲಾ, ಹಾರ್ಮೋನಿಯಂ ನುಡಿಸಬಲ್ಲ ಕಲಾವಿದ. ಸಹೃದಯಿ ಸಾಧು. ತಮ್ಮ ಮಾತುಗಾರಿಕೆಯಿಂದ ಮಂತ್ರಮುಗ್ಧ ಮಾಡಿದರು.

–ಭಾರತೀ ಗಂಗಾಧರ್, ಬೆಂಗಳೂರು

## ಬಡಮಕ್ಕಳ ಪಾಲಕ 'ರವಿ ಮಾಮ'

ಝೀ ಕನ್ನಡದ 'ಡ್ರಾಮಾ ಜೂನಿಯರ್ಸ್'ನಲ್ಲಿ ಕಟಪಾಡಿಯ ಜನಪ್ರಿಯ ವೇಷಗಾರ ರವಿ ಕಟಪಾಡಿಯವರ ಜೀವನವನ್ನಾಧರಿಸಿದ ಪ್ರಸಂಗವೊಂದನ್ನು ಮಕ್ಕಳು ಹೃದ್ಯವಾಗಿ ಅಭಿನಯಿಸಿದರು.

ಬಡತನದಲ್ಲಿ ಜನಿಸಿದ ರವಿಯವರು ಬಾಲ್ಯದಲ್ಲಿ ಅದೊಂದು ದಿನ ಟೀವಿಯಲ್ಲಿ ಬಡ ಅನಾರೋಗ್ಯಪೀಡಿತ ಮಗುವಿನ ತಾಯಿಯೊಬ್ಬಳು ಕೈಯಲ್ಲಿ ಹಣವಿಲ್ಲದೇ ದೈನೇಸಿಯಾಗಿ ವೀಕ್ಷಕರಲ್ಲಿ ಬೇಡಿದ್ದನ್ನು ಕಂಡು ಮಮ್ಮಲ ಮರುಗಿ ಆ ಮಗುವಿನ ಚಿಕಿತ್ಸೆಗೆ ಹೇಗಾದರೂ ಹಣ ಹೊಂದಿಸಲು ನಿಶ್ಚಯಿಸಿದರು. ಬೇರೆಬೇರೆ ವೇಷ ಧರಿಸಿ ಜನರನ್ನು ರಂಜಿಸಿ ಮಗುವಿನ ಚೇತರಿಕೆಗೆ ಕಾರಣರಾದರು. ಅಂದಿನಿಂದ ಸಾವಿನಂಚಿನಲ್ಲಿರುವ ಬಡ ಕಂದಮ್ಮಗಳ ಚಿಕಿತ್ಸೆಗೆ ಹಣ ಹೊಂದಿಸುವುದೇ ಗುರಿಯಾಯಿತು. ಇದುವರೆಗೆ 1.13 ಕೋಟಿ ರೂಪಾಯಿಯನ್ನು ಮಕ್ಕಳ ಚಿಕಿತ್ಸೆಗೆ ಸಂಗ್ರಹಿಸಿ ಕೊಟ್ಟಿದ್ದಾರೆ. ಹಿಂದಿಯ 'ಕೌನ್ ಬನೇಗಾ ಕರೋಡ್ ಪತಿ' ಗೆದ್ದ 12 ಲಕ್ಷ ರೂಪಾಯಿಯನ್ನೂ ಅನಾಥ ಮಕ್ಕಳ ಪಾಲನೆಗೆ ನೀಡಿದ್ದರು.

–ಕೆ. ಶ್ರೀನಿವಾಸರಾವ್, ಹರಪನಹಳ್ಳಿ

## ಆಸಕ್ತಿ ಹುಟ್ಟಿಸಿದ ಮೂರು ಕಥನಗಳು

ಝೀ ಕನ್ನಡದ 'ಶ್ರೀರಸ್ತು ಶುಭಮಸ್ತು', 'ಸೀತಾರಾಮ' ಮತ್ತು 'ಭೂಮಿಗೆ ಬಂದ ಭಗವಂತ' ಧಾರಾವಾಹಿಗಳು ಹೆಚ್ಚು ಸೆಳೆಯುತ್ತಿವೆ. 'ಶ್ರೀರಸ್ತು'ವಿನ ದತ್ತ ಹಾಗೂ 'ಸೀತಾರಾಮ'ದ ಸಿಹಿಯ ಅಭಿನಯ, 'ಭಗವಂತ'ದ ಹಿತವಚನಗಳು ಮೆಚ್ಚುವಂತಿವೆ.

–ರಮಣ್ ಶೆಟ್ಟಿ ರೆಂಜಾಳ್, ಮುಂಬೈ

## ಕುರುಡು ಪ್ರೇಮಕ್ಕೆ ಬಲಿಯಾಗದಿರಲಿ ಅನುಬಂಧ

ಕಲರ್ಸ್ ಕನ್ನಡದ 'ಬೃಂದಾವನ' ಅವಿಭಕ್ತ ಕುಟುಂಬದ ಕಥಾಹಂದರ ಒಳಗೊಂಡಿದೆ. ಇದರಲ್ಲಿ ಪರಸ್ಪರರ ನಡುವೆ ಪ್ರೀತಿ ಇರುವಂತೆ ಕಾಣುತ್ತಿದೆ. ಕುಟುಂಬದ ಹಿರಿಯರಾದ ಅಜ್ಜ–ಅಜ್ಜಿ ನೇತೃತ್ವದಲ್ಲಿ ನಾಯಕನ ಮದುವೆ ನೆರವೇರುತ್ತದೆ. ಅವನು ವಿದೇಶದಲ್ಲಿ ಓದುವಾಗಲೇ ಹೆಣ್ಣಿನ ನಿಶ್ಚಯ ಆಗಿತ್ತು. ಹಿರಿಯರು ನೋಡಿದ ಹುಡುಗಿ ಹೇಗೆ ಇದ್ದರೂ ಪ್ರೀತಿಯಿಂದ ಮದುವೆ ಆಗುತ್ತೇನೆ ಎಂದು ನಾಯಕ ತಿಳಿಸಿದ್ದ. ಅವನಿಗೆ ಆಚಾತುರ್ಯದಿಂದ ಬೇರೊಬ್ಬರ ಫೋಟೊ ತೋರಿಸಿದ್ದರು. ಈಗ ಮದುವೆ ಆಗಿದೆ. ಫೋಟೊದಲ್ಲಿ ಕಂಡವಳನ್ನು ಪ್ರತ್ಯಕ್ಷ ನೋಡದೆ, ಮಾತನಾಡಿಸದೇ ಇದ್ದರೂ ಅವಳಿಗಾಗಿ ಪರಿತಪಿಸುವುದು ವಿಪರ್ಯಾಸ. ಇದೇ ಸಂಗತಿಯನ್ನು ವಾರಗಟ್ಟಲೆ ಎಳೆಯುತ್ತಿರುವುದು ಸೋಜಿಗ. ಹೀಗೇ ಆದರೆ ಕೂಡು ಕುಟುಂಬದ ಪಾತ್ರಗಳಿಗೆ ನ್ಯಾಯ ಒದಗಿಸುವಲ್ಲಿಯೂ ಕಥೆ ವಿಫಲವಾಗುತ್ತದೆ.

–ವಾಸುದೇವ, ಹಾಸನ

## ಪೆಟ್ಟಿಗೆ!

ಮೂರ್ಖರ ಪೆಟ್ಟಿಗೆ
ಎಂದು
ಕರೆಯಲ್ಪಡುತ್ತಿದ್ದ
ಟೀವಿ
ಇಂದು
ಹುಚ್ಚರ ಪೆಟ್ಟಿಗೆ
ಎಂದು
ಕರೆಸಿಕೊಳ್ಳುವಲ್ಲಿ
ಯಶಸ್ವಿಯಾಗಿದೆ!
ಈ ಯಶಸ್ಸಿಗೆ
ಕಾರಣೀಭೂತವಾದ
ಬಿಗ್ ಬಾಸ್
ಅಭಿನಂದನಾರ್ಹ!

–ಪಿ.ಜೆ. ರಾಘವೇಂದ್ರ, ಮೈಸೂರು

## 'ಬಿಗ್ ಬಾಸ್' ಸಂದೇಶವೇನು?

ಸಮಾಜಕ್ಕೆ ಒಳ್ಳೆಯ ಸಂದೇಶ ನೀಡುವುದು ಟೀವಿ ಕಾರ್ಯಕ್ರಮಗಳ ಉದ್ದೇಶ ಎಂದು ಹೇಳಲಾಗುತ್ತದೆ. ಆದರೆ, ಕಲರ್ಸ್ ಕನ್ನಡದ ಜನಪ್ರಿಯ 'ಬಿಗ್ ಬಾಸ್' ಸಮಾಜಕ್ಕೆ ಯಾವ ರೀತಿಯ ಸಂದೇಶ ನೀಡುತ್ತದೆ? ಭಾಗವಹಿಸಿದವರ ಹುಚ್ಚುತನ, ಅಸಹ್ಯದ ಹಾವ–ಭಾವ, ಜೀರ್ಣಿಸಿಕೊಳ್ಳಲಾಗದ ಸಂಭಾಷಣೆ, ತಲೆ ಬುಡ ಇಲ್ಲದೆ ನಡೆಯುವ ಘಟನೆಗಳ ಉದ್ದೇಶವೇನು?

–ರಮಾನಂದ ಶರ್ಮಾ, ನವದೆಹಲಿ